4) ಬಳ್ಳಾರಿ ನಗರ 9:00 ಘಂಟೆಗಳು (ರಾತ್ರಿ 9:00 ರಿಂದ ಬೆಳಿಗ್ಗೆ 6:00 ರವರೆಗೆ)

5) ಸಂಡೂರು 9:00 ಘಂಟೆಗಳು (ರಾತ್ರಿ 9:00 ರಿಂದ ಬೆಳಿಗ್ಗೆ 6:00 ರವರೆಗೆ)

6) ಕೊಪ್ಪಳ 6:00 ಘಂಟೆಗಳು

ವಾಹನ ಸಂಚಾರ ದಟ್ಟಣೆ ಸಮಯದಲ್ಲಿ ಅಪಘಾತಗಳನ್ನು ನಿರ್ಬಂಧಿಸಲು ಈ ಸಮಯವನ್ನು ನಿಗಧಿಗೊಳಿಸಲಾಗಿದೆ.

ಊ ಮತ್ತು ಊ) ಹೌದು, ಪೊಲೀಸ್ ಕಾಯ್ದೆ 1963 ರ ಕಲಂ–31 ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988 ರ ಕಲಂ– 115 ರಡಿಯಲ್ಲಿ ಪ್ರದಾತ್ತವಾದ ಅಧಿಕಾರವನ್ನು ಬಳಸಿಕೊಂಡು ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರತ್ಯಾಯೋಜಿಸಲ್ಪಟ್ಟ ಪ್ರಾಧಿಕಾರವು ಮ್ಯಾಂಗ್‌ನೀಸ್ ಲಾರಿಗಳ ಸಂಚಾರವನ್ನು ನಿರ್ಬಂಧಿಸುವ ಅಧಿಕಾರವನ್ನು ಆಯಾ ವಿಭಾಗದ ಜಿಲ್ಲಾಧಿಕಾರಿಗಳು ಅಥವಾ ಪೊಲೀಸ್ ಆಯುಕ್ತರುಗಳು ವಾಹನಗಳ ಸಂಚಾರ ದಟ್ಟಣೆ ಮತ್ತು ರಸ್ತೆಗಳು ಹಾಳಾಗುತ್ತಿರುವುದರಿಂದ, ಸಂಚಾರ ನಿಷೇಧವನ್ನು ಜಾರಿಗೊಳಿಸಿರುತ್ತಾರೆ.

1451 (1361) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಬೆಂಗಳೂರು ಮೆಟ್ರೋ ರೈಲ್‌ನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಭೂಮಿ ಮತ್ತು ಕಟ್ಟಡಗಳನ್ನು ಎಷ್ಟು ವಶಪಡಿಸಿಕೊಳ್ಳಲಾಗಿದೆ; ಇದಕ್ಕಾಗಿ ಬೆಂಗಳೂರು ಮೆಟ್ರೋ ರೈಲ್ ಎಷ್ಟು ಸ್ಥಳಗಳನ್ನು ಗುರುತಿಸಲಾಗಿದೆ;

ಬಿ) ಮೆಟ್ರೋ ರೈಲ್ ಎಷ್ಟು ಕಿಲೋ ಮೀಟರ್ ಒಳಗೊಂಡಿರುತ್ತದೆ, ಮತ್ತು ನಿರ್ಮಾಣ ಕೆಲಸದ ಹಂತ (ನಕಾಶೆ ನಕ್ಷೆಯೊಂದಿಗೆ ವಿವರ ನೀಡುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಎ) ಬೆಂಗಳೂರು ಮೆಟ್ರೋ ರೈಲ್ ಅನುಷ್ಠಾನಗೊಳಿಸಲು, 676 ಸ್ಥಳಗಳನ್ನು ಭೂಸ್ವಾಧಿನಕ್ಕೆ ಗುರುತಿಸಲಾಗಿದೆ.

1) ಖಾಸಗಿ ಆಸ್ತಿಗಳು	:–	621
2) ರಾಜ್ಯ ಸರ್ಕಾರದ ಆಸ್ತಿಗಳು	:–	46
3) ಕೇಂದ್ರ ಸರ್ಕಾರದ ಆಸ್ತಿಗಳು	:–	9

ಬಿ) ಮೆಟ್ರೋ ರೈಲ್ ಮೊದಲನೇ ಹಂತದಲ್ಲಿ 33 ಕಿ.ಮೀ ಹೊಂದಿರುತ್ತದೆ. ನಿರ್ಮಾಣ ಕೆಲಸದ ಹಂತ ಈ ಕೆಳಕಂಡಂತಿರುತ್ತದೆ.

ರೀಚ್–1 : ಪೂರ್ವ ಪಶ್ಚಿಮ ಎತ್ತರಿಸಿದ ಮಾರ್ಗ 7 ಕಿ.ಮೀ,

ಪೂರ್ವ ಭಾಗ :– ಬೈಯಪ್ಪನಹಳ್ಳಿಯಿಂದ ಕ್ರಿಕೇಟ್ ಸ್ಟೇಡಿಯಂವರೆಗೆ,

ರೀಚ್–2 : ಪೂರ್ವ ಪಶ್ಚಿಮ ಎತ್ತರಿಸಿದ ಮಾರ್ಗ 7.45 ಕಿ.ಮೀ,

ಪಶ್ಚಿಮ ಭಾಗ :– ಸಿಟಿ ರೈಲ್ವೆ ಸ್ಟೇಶನ್‌ನಿಂದ ಮೈಸೂರು ರಸ್ತೆವರೆಗೆ.

ರೀಚ್–3 : ಉತ್ತರ ದಕ್ಷಿಣ ಎತ್ತರಿಸಿದ ಮಾರ್ಗ 6.7 ಕಿ.ಮೀ,

ಉತ್ತರ ಭಾಗ :– ಯಶವಂತಪುರದಿಂದ ಸ್ವಸ್ತಿಕ್‌ರವರೆಗೆ.

ರೀಚ್–4 : ಉತ್ತರ ದಕ್ಷಿಣ ಎತ್ತರಿಸಿದ ಮಾರ್ಗ 5.15 ಕಿ.ಮೀ,

ದಕ್ಷಿಣ ಭಾಗ :– ಸಿಟಿ ಮಾರ್ಕೆಟ್‌ನಿಂದ ಆರ್.ವಿ ರಸ್ತೆಯವರೆಗೆ

ರೀಚ್–5 : ಪೂರ್ವ ಪಶ್ಚಿಮ ಮತ್ತು ಉತ್ತರ ಭಾಗದ ಸುರಂಗ ಮಾರ್ಗ 6.7 ಕಿ.ಮೀ, ಕ್ರಿಕೇಟ್ ಸ್ಟೆಡಿಯಂನಿಂದ ಸಿಟಿ ರೈಲ್ವೆ ಸ್ಟೇಶನ್ ಹಾಗೂ ಸ್ವಸಿಕ್‌ನಿಂದ ಸಿಟಿ ಮಾರುಕಟ್ಟೆವರೆಗೆ.(ನಕ್ಷೆ ಲಗತ್ತಿಸಲಾಗಿದೆ)


Namma Metro - Phase I
PEENYA DEPOT
PEENYA VILLAGE
DASARAHALLI
JALAHALLI CROSS
YESHWANTHPUR
SOAP FACTORY
MAHALAKSHMI LAYOUT
RAJAJINAGAR
KUVEMPU ROAD
MALLESWARAM
SWASTIK
CITY RLY STATION
MAGADI ROAD
CENTRAL COLLEGE
CRICKET STADIUM
TRINITY CIRCLE
OLD MADRAS ROAD
B RALLI TERMINAL
CMH ROAD
ULSOOR
HOSAHALLI
TOLL GATE
MAJESTIC
VIDHANA SOUDHA
M G ROAD
CHICKPET
CITY MARKET
VIJAYANAGAR
K R ROAD
DEEPANJALI NAGAR
LALBAGH
MYSORE ROAD TERMINAL
SOUTH END CIRCLE
JAYNAGAR
R V ROAD TERMINAL
Elevated
Under Ground
At Grade
Huge Parking Lots